## ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.

**ಅಸಲು ದಾವಾ ಸಂಖ್ಯೆ: 160/2022.**

ವಾದಿಗಳು : ಪುಟ್ಟತಾಯಿಮ್ಮ ಮತ್ತು ಇತರರು.

-ವಿರುದ್ಧ-

ಪ್ರತಿವಾದಿಗಳು : ಶಿವರುದ್ರಮ್ಮ ಮತ್ತು ಇತರರು.

**7ನೇ ವಾದಿಯ ಮುಖ್ಯ ವಿಚಾರಣ ಪ್ರಮಾಣ ಪತ್ರ.**

Copy Taken for HCS Adv for Defendt No. 384 1-6-26

PW1

ಹೆಸರು : ಲಕ್ಷ್ಮಣ್.
ತಂದೆಯ ಹೆಸರು : ಲೇಟ್ ಮಾಯಿಗೌಡ,
ವಯಸ್ಸು : 56 ವರ್ಷ.
ವಾಸ : ಅಲೂರು ಗ್ರಾಮ
ಕಸಬಾ ಹೋಬಳಿ,
ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಅಲೂರು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಮಾಯಿಗೌಡ ರವರ ಮಗ ಸುಮಾರು 56 ವರ್ಷ ವಯಸ್ಸುಳ್ಳ ಲಕ್ಷ್ಮಣ್ ಆದ ನಾನು ಈ ದಿವಸ ಮಳವಳ್ಳಿಯಲ್ಲಿ ಪ್ರಮಾಣ ಮಾಡಿ ಸತ್ಯವನ್ನು ನುಡಿಯುವುದೇನೆಂದರೆ:

1. ನಾನು ಈ ಮೇಲ್ಕಂಡ ದಾವೆಯ 7ನೇ ವಾದಿಯಾಗಿದ್ದು, ದಾವೆಯ ಎಲ್ಲಾ ವಾಸ್ತವಾಂಶಗಳನ್ನು ಬಲ್ಲವನಾಗಿರುತ್ತೇನೆ.

NOTARY M. BASAVARAJU Area MALAVALLI Revenue Taluk Reg. No. Law/LCL99 Expiry: 5-4-2027 GOVT. OF KARNATAKA

B M Basavaraju
Mee: ML

2. ಈ ಮೇಲ್ಕಂಡ ದಾವೆಯನ್ನು ನಾನು ಪ್ರತಿವಾದಿಗಳ ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ದಾಖಲು ಮಾಡಿರುತ್ತೇನೆ ಈ ಪ್ರಮಾಣ ಪತ್ರವನ್ನು ಉಳಿದ ವಾದಿಗಳಾದ ನನ್ನ ತಾಯಿ ಮತ್ತು ನನ್ನ ಸಹೋದರರು ಮತ್ತು ಸಹೋದರಿಯರ ಪರವಾಗಿಯೂ ಸಹ ಸಲ್ಲಿಸಿರುತ್ತೇನೆ.

3. ನಮ್ಮ ಮೂಲ ಪುರುಷ ಪಟೇಲ್ ತಿಮ್ಮೇಗೌಡ ಆಗಿದ್ದು, ಅವರಿಗೆ ಮಾಯಿಗೌಡ, ರಾಮಕೃಷ್ಣೇಗೌಡ, ತಿಮ್ಮೇಗೌಡ @ ಪುಟ್ಟಸ್ವಾಮಿಗೌಡ ಹಾಗೂ ಬಿ.ವಿ.ಬಸವಯ್ಯ ಎಂಬ 4 ಜನ ಗಂಡು ಮಕ್ಕಳಿರುತ್ತಾರೆ. ಸದರಿ ಪಟೇಲ್ ತಿಮ್ಮೇಗೌಡನ 2ನೇ ಮಗ ರಾಮಕೃಷ್ಣೇಗೌಡನ ಹೆಂಡತಿ ಮತ್ತು ಮಕ್ಕಳೇ ಈ ದಾವೆಯ ಪ್ರತಿವಾದಿಗಳಾಗಿರುತ್ತಾರೆ.

4. ನಮ್ಮ ತಾತ ಪಟೇಲ್ ತಿಮ್ಮೇಗೌಡರ 4 ಜನ ಮಕ್ಕಳು ಈ ಹಿಂದೆಯೇ ವಿಭಾಗ ಮಾಡಿಕೊಂಡಿದ್ದು, ಅವರವರುಗಳಿಗೆ ಸೇರಿದ ಸ್ವತ್ತಿನಲ್ಲಿ ಅವರುಗಳು ಸ್ವಾಧೀನದಲ್ಲಿದ್ದು, ಅನುಭವಿಸಿಕೊಂಡು ಬರುತ್ತಿರುತ್ತೇವೆ. ಅದೇ ರೀತಿ ಪಟೇಲ್ ತಿಮ್ಮೇಗೌಡನ ಮೊದಲನೇ ಮಗ ಮಾಯಿಗೌಡ ಅಂದರೆ ನನ್ನ ತಂದೆ ವಿಭಾಗವಾದ ನಂತರ ದಿನಾಂಕ: 15-04-1982 ರಂದು ಬಾಣಸಮುದ್ರ ಗ್ರಾಮದ ಚಿಕ್ಕಬಸಪ್ಪನವರಿಂದ ಈ ದಾವೆಯ ದಾವಾ ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಈ ರೀತಿ ಖರೀದಿ ಮಾಡಿದ ನಂತರ ಸದರಿ ಸ್ವತ್ತಿನ ಸ್ವಾಧೀನದಲ್ಲಿ ನಮ್ಮ ತಂದೆ ಇದ್ದು, ಆನಂತರ ನಾವು ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದು, ಅನುಭವಿಸಿಕೊಂಡು ಬರುತ್ತಿರುತ್ತೇವೆ.

NOTARY
M. BASAVARAJU
Area MALAVALLI
Revenue Taluk
Reg. No. LAW 64
LCL 99
Expiry: 5-4-2027
GOVT. OF KARNATAKA

5. ಪ್ರತಿವಾದಿಗಳ ಮೂಲ ಪುರುಷ ರಾಮಕೃಷ್ಣೇಗೌಡ ನನ್ನ ತಂದೆ ಮಾಯಿಗೌಡನ ಹೆಸರಿನಲ್ಲಿದ್ದ ಕೆಲವೊಂದು ಆಸ್ತಿಗಳನ್ನು ನಮಗೆ ಮತ್ತು ನಮ್ಮ ತಂದೆಗೆ ತಿಳಿಯದ ರೀತಿ ತನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿದ್ದು, ಆ ವಿಚಾರ ನಮ್ಮ ತಂದೆ ಮೃತಪಟ್ಟ ನಂತರ ನಾವುಗಳು ನಮಗೆ ಸೇರಿದ ಸ್ವತ್ತುಗಳನ್ನು ವಿಭಾಗ ಮಾಡಿಕೊಳ್ಳುವ ಉದ್ದೇಶದಿಂದ ದಾಖಲಾತಿಗಳನ್ನು ತೆಗೆದು ನೋಡಿದ ಸಂದರ್ಭದಲ್ಲಿ ನಮ್ಮ ಗಮನಕ್ಕೆ ಬಂದಿರುತ್ತದೆ.

6. ರಾಮಕೃಷ್ಣೇಗೌಡ ತನ್ನ ಹೆಸರಿಗೆ ಕಾನೂನು ಬಾಹಿರವಾಗಿ ಮಾಡಿಸಿಕೊಂಡಿದ್ದ ಖಾತಾದೇಶವನ್ನು ಪ್ರಶ್ನಿಸಿ ನಾವುಗಳು ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮಂಡ್ಯ ಇಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಸದರಿ ಪ್ರಕರಣದಲ್ಲಿ ರಾಮಕೃಷ್ಣೇಗೌಡ ರವರ ಹೆಸರಿಗೆ ಮಾಡಿದ್ದ ಖಾತಾದೇಶವನ್ನು ರದ್ದುಪಡಿಸಿ ನಮ್ಮಗಳ ಹೆಸರಿಗೆ ಖಾತೆ ಮಾಡುವಂತೆ ಆದೇಸ ಮಾಡಿರುತ್ತದೆ. ಸದರಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶವನ್ನು ಪ್ರತಿವಾದಿಗಳು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಜಿಲ್ಲಾಧಿಕಾರಿಗಳ ನ್ಯಾಯಾಲಯವು ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳುವಂತೆ ತಿಳಿಸಿ ಪ್ರಕರಣವನ್ನು ಮುಕ್ತಾಯ ಮಾಡಿರುತ್ತದೆ. ಸದರಿ ಜಿಲ್ಲಾಧಿಕಾರಿಗಳ ಆದೇಶವನ್ನು ನಾವುಗಳು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸುವ ಮುಖಾಂತರ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯವು ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿರುತ್ತದೆ.

NOTARY
M. BASAVARAJU
GOVT. OF KARNATAKA

BM [signature]

೭. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಮೂಲ ಪುರುಷ ಮಾಯಿಗೌಡ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ ಸ್ವತ್ತಾಗಿದ್ದು, ಸದರಿ ಸ್ವತ್ತಿನ ಸಂಪೂರ್ಣ ಮಾಲೀಕರುಗಳು ನಾವುಗಳಾಗಿದ್ದು, ನಾವುಗಳೇ ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತೇವೆ.

೮. ನಾನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ನನ್ನ ಪರ ನಿಶಾನೆಗಳಾಗಿ ಗುರುತಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಆದ್ದರಿಂದ ನಾನು ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಾನು ದಾಖಲು ಮಾಡಿರುವ ದಾವೆಯನ್ನು ನನ್ನ ಪರ ಡಿಕ್ರಿ ಮಾಡಬೇಕಾಗಿ ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪ್ರಾರ್ಥನೆ.

ಈ ಪ್ರಮಾಣ ಪತ್ರದ ಎಲ್ಲಾ ಅಂಶಗಳು ನನಗೆ ತಿಳಿದಷ್ಟು ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಗುರ್ತಿಸಿದ್ದೇನೆ,

ವಕೀಲರು.

ಮಳವಳ್ಳಿ.

ದಿನಾಂಕ: 10/6/26

ತಿದ್ದುಪಡಿಗಳ ಸಂ:

ಪ್ರಮಾಣೀಕರಿಸುವವರು,

ನನ್ನ ಸಮ್ಮುಖದಲ್ಲಿ ಪ್ರಮಾಣ.

NOTARY
M. BASAVARAJU
Area MALAVALLI
Revenue Taluk
Reg. No. Law 44
LCL99
Expiry: 5-4-2027
GOVT. OF KARNATAKA

SWORN TO BEFORE ME
M BASAVARAJU
B.A., LL.B
ADVOCATE & NOTARY
Malavalli 571 430
Mandya Dist
10/6/26